# ಬ್ಯಾಟರಿ ಮನುಷ್ಯ!



ಸರ್ಬಿಯಾದ ಪೊಝರೆವಾಕ್ ಎಂಬಲ್ಲಿರುವ ಸ್ಲಾವಿಸ ಪಾಜ್ ಕಿಕ್ ಎಂಬಾತನ ಸಾಮರ್ಥ್ಯ ನೋಡಿದರೆ ನಿಮಗೆ 'ಶಾಕ್' ಆಗುವುದು ಖಂಡಿತ! ಈತನಿಗೂ ವಿದ್ಯುತ್ತಿಗೂ ಅವಿನಾಭಾವ ಸಂಬಂಧ! ಅತ್ಯಧಿಕ ವೋಲ್ಟೇಜಿನ ವಿದ್ಯುತ್ತನ್ನು ಈತನ ದೇಹದ ಮೇಲೆ ಹರಿಸಿದರೂ ಇವನಿಗೆ ಕಿಂಚಿತ್ತೂ ಅಪಾಯವಾಗುವುದಿಲ್ಲ! ಈತ ಸ್ನೇಹಿತರಿಗೆಲ್ಲಾ 'ಬಿಬಾ' ಎಂದೇ ಪರಿಚಿತ.

ವಿದ್ಯುತ್ತನ್ನು ತಡೆದುಕೊಳ್ಳುವ ಈತನ ಅದ್ಭುತ ದೇಹಶಕ್ತಿಯು 17 ವರ್ಷದವನಿದ್ದಾಗ ಬೆಳಕಿಗೆ ಬಂತು. ಅಂದಿನಿಂದ ಈತನದು ವಿದ್ಯುತ್ತಿನೊಡನೆ ನಿರಂತರ ಬಾಂಧವ್ಯ. 50 ವೋಲ್ಟೇಜ್‌ಗಿಂತ ಹೆಚ್ಚಿನ ವಿದ್ಯುತ್, ಮನುಷ್ಯನಿಗೆ ಬಹಳ ಅಪಾಯಕಾರಿ. ಆದರೆ ಇದಕ್ಕಿಂತ ಹೆಚ್ಚಿನ ವಿದ್ಯುತ್ತನ್ನು ತಡೆದು-ಕೊಳ್ಳುವ ಸಾಮರ್ಥ್ಯ ಸ್ಲಾವಿಸನಿಗಿದೆ. ಈತ 1983-ರಲ್ಲಿ ಬರೋಬ್ಬರಿ 20,000 ವೋಲ್ಟ್ ಕರೆಂಟ್ ಅನ್ನು ಮುಟ್ಟಿ ತೋರಿಸಿ ತನ್ನ ಮೊದಲ ಗಿನ್ನಿಸ್ ವಿಶ್ವದಾಖಲೆ ಮಾಡಿದ. 2003ರಲ್ಲಿ ಒಂದು ಕಪ್ ನೀರನ್ನು, ಕೇವಲ ಒಂದು ನಿಮಿಷ ಹಾಗೂ 37 ಸೆಕೆಂಡಿನಲ್ಲಿ 97 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣತೆವರೆಗೂ ಕಾಯಿಸಿದ. ಸಂದರ್ಭಕ್ಕೆ ಬೇಕಾಗುವ ಹಾಗೆ, ಸ್ಲಾವಿಸ ಪಾಜ್ ಕಿಕ್ ಇನ್ಸುಲೇಟರ್ (ವಿದ್ಯುತ್ ನಿರೋಧಕ) ಕಂಡಕ್ಟರ್ (ಉಷ್ಣ ವಾಹಕ) ಹಾಗೂ ಅಕ್ಯುಮ್ಯುಲೇಟರ್ ಅಥವಾ ಹೀಟರ್ ಆಗಬಲ್ಲ!

ಇವುಗಳನ್ನೆಲ್ಲ ಈತ ಹೇಗೆ ಮಾಡಬಲ್ಲ ಎಂಬ ರಹಸ್ಯವನ್ನು ಇದುವರೆಗೂ ಯಾವ ವಿಜ್ಞಾನಿಗಳಿಗೂ ಭೇದಿಸಲು ಸಾಧ್ಯವಾಗಿಲ್ಲ. ಈತ ಯಾರದ್ದಾದರೂ ಕೈಕುಲುಕಿ ಅವರಿಗೆ ಕರೆಂಟ್ ಶಾಕ್ ನೀಡಬಲ್ಲ! ಈತನ ಕೈಗಳನ್ನು ಹಿಡಿದು ವರ್ತುಲಾಕಾರವಾಗಿ ನಿಂತ ಜನರಿಗೆಲ್ಲಾ ಈತ ಕ್ರಮೇಣ ಕ್ರಮೇಣವಾಗಿ ವಿದ್ಯುತ್ ಹರಿಸಬಲ್ಲ! ಬಲ್ಬ್ ಅನ್ನು ಹೊತ್ತಿಸಬಲ್ಲ, ಎರಡು ಫೋರ್ಕ್‌ಗಳ ನಡುವೆ ಮಾಂಸವನ್ನಿಟ್ಟು ಅದರಲ್ಲಿ ವಿದ್ಯುತ್ ಹರಿಸಿ ಅದು ಸುಟ್ಟು ಕರಕಲಾಗುವಂತೆ ಮಾಡಬಲ್ಲ.

ಈತ ಬೆವರು ಹಾಗೂ ಜೊಲ್ಲು ಗ್ರಂಥಿಗಳ ವಂಶ ವಾಹಿನಿಗಳನ್ನು ಹೊಂದಿಲ್ಲ ಎನ್ನುತ್ತಾರೆ ಕೆಲವು ವಿಜ್ಞಾನಿಗಳು. 'ಕರೆಂಟ್ ನಿಜವಾಗಿಯೂ ಈತನ ದೇಹದ ಮೇಲೆ ಹರಿಯುವುದಿಲ್ಲ. ಆದರೆ ಚರ್ಮದ ಹೊರಗೆ ಹರಿಯುತ್ತದೆ. ಚರ್ಮವೇ ಸ್ವಾಭಾವಿಕ ಇನ್ಸುಲೇಶನ್‌ನಂತೆ ಕೆಲಸ ಮಾಡಬಹುದು' ಎಂದು ಇನ್ನು ಕೆಲವರು ವಿಜ್ಞಾನಿಗಳು ಅನುಮಾನ ಪಟ್ಟಿದ್ದಾರೆ.

ಪ್ರಪಂಚದ ಹಲವಾರು ಕಡೆಗಳಲ್ಲಿ ಈ ಬ್ಯಾಟರಿ ಮನುಷ್ಯ ತನ್ನ ಅದ್ಭುತ ವಿದ್ಯುತ್ ಶಕ್ತಿಯ ಪ್ರದರ್ಶನ ನೀಡಿದ್ದಾನೆ. ಎರಡು ಮಕ್ಕಳ ತಂದೆಯಾಗಿ-ರುವ ಸ್ಲಾವಿಸ ತನ್ನ ಈ ಸಾಮರ್ಥ್ಯವನ್ನು ಜನರ ಅರೆತಲೆ ನೋವು, ಸೈನಸ್, ಬೆನ್ನು ನೋವು ಮೊದಲಾದವನ್ನು ಹೋಗಲಾಡಿಸಲೂ ಉಪಯೋಗಿಸುತ್ತಾನೆ. 10 ದಶಲಕ್ಷ ವೋಲ್ಟ್ ಕರೆಂಟ್‌ಅನ್ನು ಜನರೇಟ್ ಮಾಡುವುದು ಹಾಗೂ ಬೆರಳುಗಳಿಂದ ಲೇಸರ್ ಕಿರಣಗಳನ್ನು ಹಾಯಿ-ಸುವುದು ಈತನ ಮುಂದಿರುವ ಗುರಿಯಂತೆ!



■ ವಿದ್ಯಾ ವಿ ಹಾಲಭಾವಿ